**OS- 383/2017 P.W.1**

ದಿನಾಂಕ 19.06.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

__ಪಾಟೀ ಸವಾಲು :__ ಪ್ರತಿವಾದಿಯ ಪರ ಶ್ರೀ ಜಿ ಎಂ ವಕೀಲರಿಂದ :-

ನನ್ನ ಸ್ವಂತ ಊರು ಬಾವಿಕೆರೆ. ನನ್ನ ಗಂಡನ ಮನೆ ಬಾವಿಕೆರೆ. ನನ್ನ ತವರು ಮನೆ ಭದ್ರಾವತಿ ತಾಲ್ಲೂಕು ರಂಗನಾಥಪುರ. ನನ್ನ ತಂದೆಯ ಹೆಸರು ಬೊಮ್ಮರಾಯಿ. ತಾಯಿಯ ಹೆಸರು ತೋಪಮ್ಮ. ನಾವು 4 ಜನ ಹೆಣ್ಣು ಮಕ್ಕಳು ಒಬ್ಬ ಗಂಡು ಮಗ. ಮತ್ತೊಬ್ಬರು ತೀರಿಕೊಂಡಿರುತ್ತಾರೆ. ಪ್ರತಿವಾದಿ ನನ್ನ ಸ್ವಂತ ತಂಗಿ ಎಂದರೆ ಸರಿ. ಅವರೂ ಸಹ ಬಾವಿಕೆರೆಯಲ್ಲಿ ಮದುವೆಗೆ ಮುಂಚೆ ನನ್ನ ಜೊತೆ ವಾಸವಿದ್ದರು ಎಂದರೆ ಸರಿಯಲ್ಲ. ರಂಗನಾಥಪುರದಲ್ಲಿ ನನ್ನ ಮದುವೆ 1996 ರಲ್ಲಿ ಆಗಿರುತ್ತದೆ. ನನ್ನ ಗಂಡನ ಹೆಸರು ಬೋರಪ್ಪ. ನನಗೆ ಇಬ್ಬರು ಮಕ್ಕಳು. ರವಿ ಮತ್ತು ರಮೇಶ. ನನ್ನ ಗಂಡನ ಹೆಸರಿನಲ್ಲಿ ಬಾವಿಕೆರೆಯಲ್ಲಿ ನಿವೇಶನ ಇದೆ ಎಂದರೆ ಅವರ ತಾಯಿಯ ಕಡೆಯಿಂದ ಬಂದಿದೆ ಎಂದು ನುಡಿಯುತ್ತಾರೆ. ನನ್ನ ಮಕ್ಕಳಿಗೆ ಬಾವಿಕೆರೆಯಲ್ಲಿ ನಿವೇಶನ ಮಂಜೂರಾಗಿಲ್ಲ. ನನ್ನ ಮಗನಿಗೆ ಮಂಜೂರಾಗಿದೆ ಎಂದು ನಾನು ಕೇಳಿರುತ್ತೇನೆ ಆದರೆ ನಮ್ಮ ಜೊತೆ ಅವರು ವಾಸವಿಲ್ಲ.

ದಾವಾ ಆಸ್ತಿಯು ನನ್ನದ್ದು ಎಂದು ಪ್ರತಿವಾದಿಯು ಜಗಳಕ್ಕೆ ಬಂದ ಕಾರಣ ನಾನು ಈ ದಾವೆಯನ್ನು ಹಾಕಿರುತ್ತೇನೆ. ದಾವಾ ಆಸ್ತಿಯ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಚಂದ್ರ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ನಿಂಗರಾಜು. ಪ್ರತಿವಾದಿಯರಿಗೆ ಬಾವಿಕೆರೆಯಲ್ಲಿ ನಿವೇಶನ ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಸಂಖ್ಯೆ ನನಗೆ ಹಕ್ಕು ಪತ್ರ ತೆಗೆದುನೋಡಿದರೆ ಗೊತ್ತಾಗುತ್ತದೆ. ದಾವಾ ಆಸ್ತಿ 40 x 60 ಅಡಿ ಅಳತೆ ಇದೆ. ಪ್ರತಿವಾದಿಗೆ ಅಸೆಸ್ಮಂಟ್ ನಂಬರ್ 854 ರಲ್ಲಿ 40 x 60 ಅಡಿ ಅಳತೆಯ ನಿವೇಶನ ಮಂಜುರಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ಪೂರ್ವಕ್ಕೆ ಫಾರಂ ರಸ್ತೆ , ಪಶ್ಚಿಮಕ್ಕೆ ನಿಂಗರಾಜು ರವರು ಆಸ್ತಿ ಉತ್ತರಕ್ಕೆ ಬಿ ಪಿ ರಸ್ತೆ ಹಾಗೂ ದಕ್ಷಿಣಕ್ಕೆ ಪಾವರ್ತಿ ರವರ ಆಸ್ತಿ ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಹಾಗೂ ನನ್ನ ಮಕ್ಕಳ ವಿರುದ್ದ ಪ್ರತಿವಾದಿಯರು ಲಕ್ಕವಳ್ಳಿ ಪೊಲೀಸ್ ಠಾಣೆಯಲ್ಲಿ ದೂರನ್ನು ಕೊಟ್ಟಿದ್ದರು ಎಂದರೆ ಸರಿ. ನಾನು ಮತ್ತು ನನ್ನ ಮಕ್ಕಳು ಅದರಲ್ಲಿ ಮುಚ್ಚಳಿಕೆ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪೊಲೀಸರು ನೀವು ಕೇಳುವುದಿಲ್ಲ ನ್ಯಾಯಾಲಯಕ್ಕೆ ಹೋಗಿ ಎಂದು ನಮಗೆ

ತಿಳಿಸಿದರು ಎಂದು ನುಡಿಯುತ್ತಾರೆ. ಸರ್ಕಾರದ ಬಸವ ಕಲ್ಯಾಣ ಯೋಜನೆಯಡಿ ನಾನು ದಾವಾ ಆಸ್ತಿಯ ಮೇಲೆ ಸಾಲ ಪಡೆದಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಗ್ರಾಮ ಪಂಚಾಯಿತಿಯವರು ಇ ಸ್ವತ್ತು ನಮಗೆ ಕೊಟ್ಟಿಲ್ಲ. ಪ್ರತಿವಾದಿಗೆ ಅವರ ಆಸ್ತಿಗೆ ಸಂಬಂಧಪಟ್ಟಂತೆ ಗ್ರಾಮ ಪಂಚಾಯಿತಿಯವರು ಇ ಸ್ವತ್ತು ಕೊಟ್ಟಿರುತ್ತಾರೆ ಎಂದರೆ ಸದರಿ ವಿಚಾರ ನನಗೆ ಗೊತ್ತಿಲ್ಲ. ಪ್ರತಿವಾದಿಯು ನನ್ನ ವಿರುದ್ಧ ಹೆಚ್ಚುವರಿ ಕಿರಿಯ ಶ್ರೇಣಿ ನ್ಯಾಯಾಲಯ ತರೀಕೆರೆ ರವರಲ್ಲಿ ಅಸಲು ದಾವಾ ಸಂಖೆ 434/2022 ರಂತೆ ಅವರ ಆಸ್ತಿಗೆ ಸಂಬಂಧಪಟ್ಟಂತೆ ದಾವೆ ಹಾಕಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ವಕೀಲರ ಮೂಲಕ ತಕರಾರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಪ್ರತಿವಾದಿಯರ ಆಸ್ತಿಗೆ ನಾವು ತಂಟೆ ತಕರಾರು ಮಾಡಿದ ಕಾರಣ ಅವರು ನಮ್ಮ ವಿರುದ್ದ ಪೊಲೀಸ್ ದೂರನ್ನು ನೀಡಿದ್ದರು ಹಾಗೂ ನಾವು ಅವರಿಗೆ ತಂಟೆ ತಕರಾರು ಮಾಡುವುದಿಲ್ಲ ಎಂದು ನಮ್ಮ ಹೇಳಿಕೆಯನ್ನು ಪೊಲೀಸರ ಮುಂದೆ ನೀಡಿದ್ದೆವು ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಪ್ರತಿವಾದಿಯರು ಬಂದು ತೊಂದರೆ ಕೊಟ್ಟಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯರು ಯಾವುದೇ ತೊಂದರೆ ಕೊಡದಿದ್ದರೂ ಸಹ ನಾನು ಅವರ ವಿರುದ್ದ ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ದಾಖಲೆಯನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

(ಸಂತೋಷ ಕುಮಾರ್ ಪಿ. ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.